ಓ ಎಸ್ಃ 799/2014

**ಡಿ ಡಬ್ಲ್ಯೂ : 1**

ದಿನಾಂಕಃ 22.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಜಿ ಯು ವಕೀಲರಿಂದಃ**

ಸ.ನಂ. 46/2 ಕೇಸ್ ಹಾಕುವ ಸಮಯದಲ್ಲಿ 15 ಎಕರೆ 20 ಗುಂಟೆ ಜಮೀನು ಒಟ್ಟಾಗಿತ್ತು ಎಂದರೆ ಸರಿ. ಸದರಿ ಸ.ನಂ. 46/2 ರಲ್ಲಿ ನನ್ನ ಹೆಸರಿನಲ್ಲಿ 3 ಎಕರೆ 20 ಗುಂಟೆ ಇತ್ತು ಎಂದರೆ ಸರಿ. ಮರಿಹೊನ್ನಯ್ಯ ಮತ್ತು ಚಿಕ್ಕಹೊನ್ನಯ್ಯ ನವರ ಮಕ್ಕಳಗಳ ಹೆಸರು ಕೂಡ ಪಹಣಿಯಲ್ಲಿ ಬರುತ್ತಿತ್ತು ಎಂದರೆ ಸರಿ. ಸ.ನಂ. 46/2 , ಪೋಡಿಯಾಗಿ ಸ.ನಂ. 46/3 ರಿಂದ 8 ಆದಾಗ ನನಗೆ ಯಾರು ಮಾಹಿತಿಯನ್ನು ನೀಡಿರುವುದಿಲ್ಲ. ಸ.ನಂ. 46/2 ಕ್ಕೆ ಸ್ಕೆಚ್ ಮಾಡಿಸಿದಾಗ ನನಗೆ ಸರ್ವೆ ಇಲಾಖೆಯಿಂದ ಯಾವುದೇ ನೋಟೀಸ್ ಜಾರಿಯಾಗಿರುವುದಿಲ್ಲ. ಅದೇ ರೀತಿ ಆ ಜಮೀನಿನಲ್ಲಿ ಯಾರು ಸ್ವಾಧೀನದಲ್ಲಿದ್ದರೋ ಅವರಿಗೂ ನೋಟೀಸ್ ಜಾರಿಯಾಗಿರಲಿಲ್ಲ ಎಂದರೆ ಸರಿ. ಸದರಿ ಸ.ನಂ. 46/2 ರ ಮೂಲ ಮಾಲೀಕರು ರಾಮಕ್ಕ ರೇವಣ್ಣ ನವರಿಗೆ ಮತ್ತು ರಂಗಯ್ಯ ನವರ ಮಗ ಕೆಂಪಯ್ಯ ನವರಿಗೆ 6 ಎಕರೆ 36 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ಸರಿ.

ವಾದಿಯವರ ತಂದೆ ಕ್ರಯಕ್ಕೆ ಕೊಂಡಾಗ ವಾದಿ ಈ ದಿನದವರೆವಿಗೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ . ಪ್ರತಿವಾದಿ 1 ರಿಂದ 11 ರವರು ಸರ್ವೆ ಅಧಿಕಾರಿಗಳ ಜೊತೆ ಶಾಮೀಲಾಗಿ ಯಾರಿಗೂ ಗೊತ್ತಿಲ್ಲದೇ ಪೋಡಿ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ, ನಂತರ ಸರಿ ಎಂದು ನುಡಿಯುತ್ತಾರೆ. ವಾದಿಗಳಿಗೆ, ನನಗೂ ಗೊತ್ತಿಲ್ಲದೇ ಪ್ರತಿವಾದಿ 1 ರಿಂದ 8 ರವರು ಪೋಡಿ ಮಾಡಿಸಿ ಕೊಂಡಿದ್ದಾರೆ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿ ದ್ದಾಗ ಪೋಡಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ವ್ಯವಸ್ಥಾ ಪತ್ರದ ಪ್ರಕಾರ ತಾಲ್ಲೂಕು ಕಚೇರಿಯಲ್ಲಿ ನನಗೂ ಮತ್ತು ವಾದಿಗೆ ಮಾಹಿತಿ ನೀಡದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

ನಿ ಡಿ 16 ರಲ್ಲಿ ಇರುವ ಲಕ್ಷ್ಮಮ್ಮ ನವರು ಪ್ರತಿವಾದಿ 3 ರವರು ಎಂದರೆ ಸರಿ. ನಿ ಡಿ 16 ರಲ್ಲಿ ಪ್ರತಿವಾದಿ 4 ರಿಂದ 8 ರವರ ಹೆಸರು ಇರುತ್ತದೆ ಎಂದರೆ ಸರಿ. ಚಿಕ್ಕಹೊನ್ನಯ್ಯ ಮತ್ತು ಮರಿಹೊನ್ನಯ್ಯ ನವರಿಗೆ 6 ಎಕರೆ 36 ಗುಂಟೆ ಮಾತ್ರ ಇರುತ್ತದೆ ಎಂದರೆ **ಸರಿ.**

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ